ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು

410(629); ಶ್ರೀ ಬಾಲಕೃಷ್ಣ ಸಿ.ಎನ್

ಅ) ಚನ್ನರಾಯಪಟ್ಟಣ ತಾಲ್ಲೂಕು ಶ್ರವಣಬೆಳಗೊಳ ಮತ್ತು ನುಗ್ಗೇಹಳ್ಳಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಶ್ರವಣಬೆಳಗೋಳ ಕ್ಷೇತ್ರವು ಐತಿಹಾಸಿಕ ಪ್ರವಾಸಿ ಕೇಂದ್ರವಾಗಿದ್ದು, ಪ್ರವಾಸಿಗರಿಗೆ ಹಾಗೂ ಸಾರ್ವಜನಿಕರಿಗೆ ಮೂಲಭೂತ ಸೌಲಭ್ಯಗಳ ತೊಂದರೆಯಿಂದ ಪ್ರವಾಸೋದ್ಯಮವು ಕುಂಠಿತಗೊಳ್ಳುತ್ತಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಈ ಎರಡು ಬಸ್ ನಿಲ್ದಾಣಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಈ) ಶ್ರವಣಬೆಳಗೋಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಿರಿಸಾವೆಯಲ್ಲಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಬಸ್ ನಿಲ್ದಾಣವನ್ನು ಯಾವಾಗ ನಿರ್ಮಿಸಲಾಗುವುದು?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಚನ್ನರಾಯಪಟ್ಟಣ ತಾಲ್ಲೂಕು ಶ್ರವಣಬೆಳಗೊಳ ಮತ್ತು ನುಗ್ಗೇಹಳ್ಳಿ ಬಸ್ ನಿಲ್ದಾಣಗಳಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಆಸನಗಳ ವ್ಯವಸ್ಥೆ, ಶೌಚಾಲಯಗಳು ಇತ್ಯಾದಿ ಸೌಕಯಗಳನ್ನು ಕಲ್ಪಿಸಲಾಗಿರುತ್ತದೆ.

ಆ) ಮತ್ತು ಇ) ಶ್ರವಣಬೆಳಗೊಳ ಐತಿಹಾಸಿಕ ಪ್ರವಾಸಿ ಕೇಂದ್ರಕ್ಕೆ ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯ ಒದಗಿಸಲಾಗಿದ್ದು, ಪ್ರವಾಸಿಗರಿಗೆ ಹಾಗೂ ಸಾರ್ವಜನಿಕರಿಗೆ ಅವಶ್ಯವಿರುವ ಮೂಲಭೂತ

ಸೌಕರ್ಯಗಳನ್ನು ಒದಗಿಸಿರುವುದರಿಂದ ಪ್ರವಾಸೋದ್ಯಮಕ್ಕೆ ಯಾವುದೇ ಕುಂಠಿತ ಉಂಟಾಗಿರುವುದಿಲ್ಲ.

ಈ) ಇಲ್ಲ.

ಉ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಬಸ್‌ಗಳ ಕೊರತೆ

411(630); ಶ್ರೀ ಬಾಲಕೃಷ್ಣ ಸಿ.ಎನ್

ಅ) ಚನ್ನರಾಯಪಟ್ಟಣ ಕೆ.ಎಸ್.ಆರ್.ಟಿ.ಸಿ. ಬಸ್ ಘಟಕದಲ್ಲಿ ಬಸ್ಸುಗಳ ಕೊರತೆಯಿದ್ದು, ಗ್ರಾಮಾಂತರ ಪ್ರದೇಶಗಳಿಗೆ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಘಟಕದಲ್ಲಿ ಎಷ್ಟು ಬಸ್ಸುಗಳು ದುರಸ್ತಿಗೊಳಪಟ್ಟಿವೆ; ಈ ಬಸ್ಸುಗಳನ್ನು ದುರಸ್ತಿಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರಕ್ಕಿರುವ ತೊಂದರೆಗಳೇನು;

ಇ) ಚನ್ನರಾಯಪಟ್ಟಣ ಘಟಕಕ್ಕೆ ಹೊಸ ಬಸ್ಸುಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಎಷ್ಟು ಹೊಸ ಬಸ್ಸುಗಳನ್ನು ನೀಡಲಾಗುವುದು; (ಪೂರ್ಣ ವಿವರಗಳನ್ನು ನೀಡುವುದು)?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ದಿನಾಂಕ.31.01.2015ರಲ್ಲಿದ್ದಂತೆ ಚನ್ನರಾಯಪಟ್ಟಣ ಘಟಕದಲ್ಲಿ ಒಟ್ಟು 118 ಅನುಸೂಚಿಗಳನ್ನು 129 ವಾಹನ ಬಲದಿಂದ ಕಾರ್ಯಾಚರಣೆ ಮಾಡಲಾಗುತ್ತಿದ್ದು, 11 ಹೆಚ್ಚುವರಿ ವಾಹನಗಳು ಇರುತ್ತವೆ. ಇದರಿಂದಾಗಿ ಘಟಕದ ಅನುಸೂಚಿಗಳ ಕಾರ್ಯಾಚರಣೆಗೆ ಯಾವುದೇ ರೀತಿಯ ವಾಹನಗಳ ಕೊರತೆ ಇರುವುದಿಲ್ಲ.

ಆ) ಪ್ರಸ್ತುತ ಘಟಕದಲ್ಲಿ ಯಾವುದೇ ವಾಹನಗಳು ದುರಸ್ಥಿಗೆ ಇರುವುದಿಲ್ಲ.